(ಇಂದು ದಿನಾಂಕ:22.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-**

ನಾನು ಹಾಗೂ ನನ್ನ ಸಹೋದರ ಪ್ರತಿವಾದಿಗೆ ನಿಪಿ 1 ಹಾಗೂ 2 ನ್ನು ಬರೆದುಕೊಡುವ ಸಮಯದಲ್ಲಿ ಆಸ್ತಿಯ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ನನ್ನ ತಂದೆ ನನಗೆ ಭಾಗ ನೀಡಿದ ಜಮೀನಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದು ಅವರು ನನ್ನ ಜೊತೆ ಕ್ರಯದ ಕರಾರಿಗೆ ಸಹಿ ಮಾಡಿರುತ್ತಾರೆ. ನಿಡಿ 2 ರಲ್ಲಿ ಇರುವ ಮಾರಾಟಗಾರರ ಸಹಿ ನನ್ನದೇ. ನಿಪಿ1(ಬಿ) ಹಾಗೂ ನಿಡಿ2 ರಲ್ಲಿ ಇರುವ ಸಹಿಗಳು ನನ್ನವೇ. ನಿಪಿ1 ರಲ್ಲಿನ ಷರಾ ಪ್ರಕಾರ ನನಗೆ ಹಣ ತಲುಪಿದೆ ಎಂದರೆ ಸರಿಯಲ್ಲ. ನಿಪಿ1 ಹಾಗೂ ನಿಪಿ 2 ರಲ್ಲಿ ನನಗೆ ಹಾಗೂ ನನ್ನ ಅಣ್ಣನಿಗೆ ಹಣ ನೀಡಿ ಷರಾ ಬರೆದಿದೆ ಎಂದರೆ ಸರಿಯಲ್ಲ, ಸಾಕ್ಷಿ ಅದನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ. ನಿಪಿ 1(ಎಮ್) ನನ್ನ ತಂದೆ ನನ್ನ ಹಾಗೂ ನನ್ನ ತಮ್ಮನ ಪರವಾಗಿ ಹಣ ಪಡೆದು ಮಾಡಿಕೊಟ್ಟ ಷರಾ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯ ಖಾತೆ 2006-07 ರಲ್ಲಿ ನಮ್ಮ ಹೆಸರಿಗೆ ಆಯಿತು. ಈ ದಾವೆ ಸಲ್ಲಿಸಿದ ನಂತರ ಖಾತೆ ನಮ್ಮ ಹೆಸರಿಗೆ ಆಯಿತು ಎಂದರೆ ಸರಿಯಲ್ಲ. ನಮ್ಮ ಹೆಸರಿಗೆ 2006 ನವೆಂಬರ್‌ನಲ್ಲಿ ಖಾತೆ ಆಯಿತು ಎಂದರೆ ಸರಿ. ಖಾತೆ ಆಗದೇ ಕ್ರಯಪತ್ರ ಬರೆದುಕೊಡುವ ಅಧಿಕಾರ ನಮಗೆ ಇರಲಿಲ್ಲ ಎಂದರೆ ಸರಿ. ಈ ದಾವೆ ಹೂಡುವಾಗ ಖಾತೆ ನಮ್ಮ ಹೆಸರಿಗೆ ಆಯಿತು ಎಂದರೆ ಸರಿ. ನನಗೆ ವಾದಿ ನೋಟಿಸ್ ನೀಡಿದ್ದರು. ನಾವು ನೋಟಿಸ್ ನೀಡಿದ ನಂತರ ಕಂದಾಯ ದಾಖಲೆಗಳನ್ನು ನಮ್ಮ ಹೆಸರಿಗೆ ಮಾಡಲು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಕಂದಾಯ ದಾಖಲೆಗಳನ್ನು ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಎನ್ನುತ್ತಾರೆ. ನಮ್ಮ ಹೆಸರಿಗೆ ಖಾತೆ ಇಲ್ಲದೇ ನಾವು ನಿಡಿ 2 ರಂತೆ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತೇವೆ. ನಮಗೆ ಖರೀದಿಯ ಎಲ್ಲಾ ಹಣವನ್ನು ನಮಗೆ
ನೀಡಿ ರೂ.5000/- ವನ್ನು ಮಾತ್ರ ನೀಡಬೇಕಾಗಿದ್ದ ಕಾರಣ ಮೌಖಿಕವಾಗಿ ನಾವು ವಾದಿಗೆ ದಾವಾ ಆಸ್ತಿಯ ಸ್ವಾಧೀನತೆಯನ್ನು ಬಿಟ್ಟುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ವಾದಿಯ ಜಮೀನು ಇದೆ ಎಂದರೆ ಸರಿ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನೋಟಿಸ್ ನೀಡಿದ ನಂತರ 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಹಾಗೆ ನಿಡಿ 2 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಹೋದರ ನೋಟಿಸ್ ಹೋದ ನಂತರ ಕ್ರಯಪತ್ರ ಬರೆದುಕೊಟ್ಟರು ಎಂದರೆ ಸಾಕ್ಷಿ ನನಗೆ ವಿಷಯ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆ ಹೂಡಿದ ನಂತರ ವಾದಿಯಿಂದ 2 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನತೆಯನ್ನು ಬಲವಂತವಾಗಿ ಪಡೆದರು ಎಂದರೆ ಸರಿಯಲ್ಲ. ನಾನು ನಿಪಿ1 ರಲ್ಲಿ ಹೇಳಿದ ಹಾಗೆ ಹಣ ಪಡೆದಿದ್ದರು ಹಾಗೂ ದಾವಾ

ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿದರು ನಿಪಿ 1 ರಂತೆ ಕ್ರಯಪತ್ರವನ್ನು ಮಾಡಿಕೊಡಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಂತೆ ಹಣ ಪಡೆದು ಷರಾ ಬರೆದುಕೊಟ್ಟಿದ್ದರು ಪಡೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಇರುವ ಎಲ್ಲಾ ಸಹಿಗಳು ನನ್ನವೇ ಆಗಿದ್ದರೂ ನನ್ನವಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಮೋಸ ಮಾಡಿ 2 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿರುವುದರಿಂದ ನಿಪಿ1 ರಲ್ಲಿ ಸಹಿಗಳು ನನ್ನವು ಅಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ವಿಚಾರಗಳು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ 3 ನೇ ಪ್ರತಿವಾದಿಗೆ ದಾನಪತ್ರ ಬರೆಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಕಂದಾಯ ದಾಖಲೆಗಳು ಇಲ್ಲದ ಕಾರಣ ಕ್ರಯದ ಕರಾರು ಆಗಿದಾಗಿನಿಂದಲೂ ಈ ದಾವೆ ಹೂಡುವವರಗೊ ಕಾಲಹರಣ ಮಾಡಿಕೊಂಡು ಬಂದೆ ಎಂದರೆ ಸರಿಯಲ್ಲ. ನಾನು ಹಾಗೂ ಉಳಿದಿ ಪ್ರತಿವಾದಿಗಳು ಒಟ್ಟಾಗಿ ವಾದಿಗೆ ಕ್ರಯಪತ್ರ ಬರೆದುಕೊಡುವ ಬಾಧ್ಯತೆ ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.